# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ–3068/2014/ಡಿಆರ್ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 31/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ನಾಗರಾಜ ಶೆಟ್ಟಿ, ಆರ್, ಹಿಂದಿನ ತಹಶೀಲ್ದಾರ್, ಗೌರಿಬಿದನೂರು ತಾಲ್ಲೂಕು, (ಹಾಲಿ ನಿವೃತ್ತ), (2) ಶ್ರೀ.ಡಿ.ರಂಗನಾಥ್, ಗ್ರಾಮ ಲೆಕ್ಕಾಧಿಕಾರಿ, ಜರಬಂಡಹಳ್ಳಿ ಕಂದಾಯ ವೃತ್ತ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು, ಮತ್ತು (3) ಶ್ರೀ.ಆರ್.ನಾಗಾಂಜನೇಯ, ಪರ್ಯಾವೇಕ್ಷಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ನಂಜಪ್ಪ ಎ.ಕೆ ಬಿನ್ ಲೇಟ್.ನರಸಿಂಹಪ್ಪ, ಉಪ್ಪಾರಹಳ್ಳಿ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ನಾಗರಾಜ ಶೆಟ್ಟಿ, ಆರ್, ಹಿಂದಿನ ತಹಶೀಲ್ದಾರ್, ಗೌರಿಬಿದನೂರು ತಾಲ್ಲೂಕು, (ಹಾಲಿ ನಿವೃತ್ತ), (2) ಶ್ರೀ.ಡಿ.ರಂಗನಾಥ್, ಗ್ರಾಮ ಲೆಕ್ಕಾಧಿಕಾರಿ, ಜರಬಂಡಹಳ್ಳಿ ಕಂದಾಯ ವೃತ್ತ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು, ಮತ್ತು (3) ಶ್ರೀ.ಆರ್.ನಾಗಾಂಜನೇಯ, ಪರ್ಯಾವೇಕ್ಷಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಗೌರಿಬಿದನೂರು ತಾಲ್ಲೂಕು, ಮಂಚೇನಹಳ್ಳಿ ಹೋಬಳಿ, ಉಪ್ಪರಹಳ್ಳಿ ಗ್ರಾಮದ ಸ.ನಂ.137 ರ ಸರ್ಕಾರಿ ಜಮೀನಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಮೂನೆ–53ನ್ನು ಸಲ್ಲಿಸದಿದ್ದರೂ ಕೂಡ ಭೂನ್ಯಾಯ ಮಂಡಳಿಯಿಂದ ಅಕ್ರಮವಾಗಿ ಜಮೀನು ಮಂಜೂರು ಮಾಡಿರುತ್ತಾರೆ. ನೂರಾರು ಎಕರೆ ಸ್ವಂತ ಜಮೀನು ಹೊಂದಿರುವ ಶ್ರೀಮಂತ ವರ್ಗದ ಚಂದ್ರ ಎಂಬುವರಿಗೆ ಅಕ್ರಮವಾಗಿ 2 ಎಕರೆ ಜಮೀನನ್ನು ಮಂಜೂರು ಮಾಡಿರುತ್ತಾರೆಂದು ಆಪಾದನೆ ಮಾಡಿ ದೂರನ್ನು ಸಲ್ಲಿಸಿರುತ್ತಾರೆ.

3. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತನ್ನ ಆಕ್ಷೇಪಣೆಯಲ್ಲಿ ಉಪ್ಪರಹಳ್ಳಿ ಗ್ರಾಮದ ಸ.ನಂ.137 ಸರ್ಕಾರಿ ಜಮೀನಾಗಿರುತ್ತದೆ. ಈ ಸರ್ವೆ ನಂಬರ್ ಜಮೀನಿಗೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಗೊಳಿಸಲು ಕೋರಿ ನಮೂನೆ–53 ರಲ್ಲಿ ಅನಧಿಕೃತ ಅನುಭವ

ಇರುವವರ ಬಗ್ಗೆ ಸರ್ವೆಯರ್‌ರವರು ನಕ್ಷೆಯನ್ನು ತಯಾರಿಸಿ, ನಂತರ ರಾಜಸ್ವ ನಿರೀಕ್ಷಕರು ಬಗರ್ ಹುಕುಂ ಸಾಗುವಳಿದಾರರ ಅನುಭವದಂತೆ ಜಮೀನನ್ನು ಸಕ್ರಮಗೊಳಿಸಲು ಕಡತವನ್ನು ಸರ್ಕಾರದಿಂದ ನೇಮಕಾತಿ ಹೊಂದಿದ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ದಿ.30/10/12 ರಂದು ಮಂಡಿಸಿ, ಮೊದಲನೇ ಬಾರಿ ಅನುಮೋದನೆ ಪಡೆಯಲಾಯಿತು. ನಂತರ ಮಂಜೂರಾತಿಯನ್ನು ಸ್ವೀಕರಿಸುವ ವಿಚಾರದಲ್ಲಿ ದಿ.22/12/12 ರಂದು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಮಂಡಿಸಲಾಯಿತು. ಸಮಿತಿಯು ಕಡತವನ್ನು ಪರಿಶೀಲಿಸಿ ಸರ್ವೆ ನಂಬರಿನಲ್ಲಿರುವ ಬಗರ್ ಹುಕುಂ ಸಾಗುವಳಿದಾರರಾದ ಎ.ಚಂದ್ರ ಬಿನ್ ಅಶ್ವಥಪ್ಪ, ಗಂಗಾಧರ್ ಬಿನ್ ನಂಜಪ್ಪ ರವರಿಗೆ ತಲಾ 2 ಎಕರೆ ಹಾಗೂ ಮುತ್ತಣ್ಣ ಬಿನ್ ದೊಡ್ಡರಂಗಯ್ಯ ಇವರಿಗೆ 2.30 ಎಕರೆ ಜಮೀನನ್ನು ಸಕ್ರಮ ಗೊಳಿಸಲು ಆದೇಶಿಸಿರುತ್ತದೆ. ಸಕ್ರಮೀಕರಣ ಸಮಿತಿಯ ನಿರ್ದೇಶನದಂತೆ ಅಧಿಕೃತ ಜ್ಞಾಪನ ಹೊರಡಿಸಿರುತ್ತದೆ. ಸದರಿ ಸಮಿತಿಯ ನಿರ್ದೇಶನದಂತೆ ಹೊರಡಿಸಿರುವ ಆದೇಶದ ವಿರುದ್ಧ ಅಸಮಾಧಾನ ಗೊಂಡಿರುವ ಶ್ರೀಯುತ.ಎನ್.ಗರುಡಾಧರಯ್ಯ ರವರು ಕರ್ನಾಟಕ ಭೂಕಂದಾಯ ಅಧಿನಿಯಮ 108–ಜಿ ಮೇರೆಗೆ ಮೇಲ್ಮನವಿ ಪ್ರಾಧಿಕಾರವಾದ ಚಿಕ್ಕಬಳ್ಳಾಪುರ ಉಪ ವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪ ವಿಭಾಗ ಇವರ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ. ದೂರುದಾರರು ಸರ್ಕಾರವು ನಿಗದಿ ಪಡಿಸಿದ ಸಮಯದಲ್ಲಿ ಬಗರ್ ಹುಕುಂ ಸಕ್ರಮೀಕರಣ ಗೊಳಿಸಲು ಕೋರಿ ನಮೂನೆ–53 ರಲ್ಲಿ ತಾಲ್ಲೂಕು ಕಚೇರಿಗೆ ಅರ್ಜಿಯನ್ನು ನಿಗದಿತ ಅವಧಿಯಲ್ಲಿ ಸಲ್ಲಿಸಿರುವುದಿಲ್ಲವಾದ್ದರಿಂದ, ಅರ್ಜಿದಾರರಿಗೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಗೊಳಿಸಲು ಕಡತ ತಯಾರಿಸಿರುವುದಿಲ್ಲ. ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ವಿಷಯದಲ್ಲಿ ಯಾವುದೇ ರೀತಿಯ ನಕಲಿ ಭೂದಾಖಲೆಗಳನ್ನು ಸೃಷ್ಟಿಸಿ ರೈತರಿಗೆ ಮೋಸ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಎದುರುದಾರರು ತಮ್ಮ ಅಧಿಕಾರಾವಧಿಯಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಪರಾಧ ಮಾಡಿರುತ್ತಾರೆ. ಗಂಗಾಧರಯ್ಯ ರವರಿಗೆ ದ್ರೋಹ ಮಾಡಿ, ಅನಧಿಕೃತ ಸಾಗುವಳಿ ಮಾಡದೇ ಇರುವ ಚಂದ್ರ ರವರಿಗೆ ಜಮೀನು ಮಂಜೂರು ಮಾಡಿದ್ದಾರೆ. ಕಡು ಬಡವರಿಗೆ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನು ತೋರಿಸಿದ್ದಾರೆ. ಆದ್ದರಿಂದ, ಗಂಗಾಧರಯ್ಯ ಇವರಿಗೆ ನ್ಯಾಯ ದೊರಕಿಸಿ ಆತನಿಗೆ 3.20 ಎಕರೆ ಜಮೀನು ಮಂಜೂರು ಮಾಡಲು ಸಕ್ರಮೀಕರಣ ಸಮಿತಿಗೆ ನಿರ್ದೇಶನ ನೀಡುವಂತೆ ಕೋರಿರುತ್ತಾರೆ. ದೂರುದಾರ, ಗಂಗಾಧರಯ್ಯ ಇವರುಗಳು ಬಗರ್ ಹುಕುಂ ಸಮೀಕರಣ ಮಂಡಳಿಗೆ ಜಮೀನು ಸಕ್ರಮಗೊಳಿಸಲು ಅರ್ಜಿ ನಮೂನೆ–53ನ್ನು ನಿಗದಿತ ಅವಧಿಯೊಳಗೆ ಸಲ್ಲಿಸಿದ್ದು, ಎ.ಚಂದ್ರ ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿಲ್ಲ ಎಂಬುದು ಗ್ರಾಮ ಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರ ನಿವೇದನೆಯಲ್ಲಿ ಕೂಲಂಕಷವಾಗಿ ತಿಳಿಸಲಾಗಿದೆ ಎಂದು ತಿಳಿಸಿರುತ್ತಾರೆ.

5. ದೂರುದಾರರು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಗಂಗಾಧರಯ್ಯ ರವರು ನಮೂನೆ–53ನ್ನು ಸಲ್ಲಿಸಿರುವುದು ಕಂಡುಬರುತ್ತದೆ. ತಾಲ್ಲೂಕು ಸರ್ವೆಯರ್‌ರವರ ವರದಿಯಲ್ಲಿ ಗಂಗಾಧರಯ್ಯ ರವರು ಬಗರ್ ಹುಕುಂ ಸಾಗುವಳಿ ಮಂಜೂರಿಗೆ ಕೋರಿರುವ

ಪ್ರದೇಶವನ್ನು ಗುರ್ತಿಸಿರುತ್ತಾರೆ. ರಾಜಸ್ವ ನಿರೀಕ್ಷಕರ ನಿವೇದನೆಯಲ್ಲಿ ಎ.ಚಂದ್ರ ಮತ್ತು ಗಂಗಾಧರಪ್ಪ ಇವರಿಬ್ಬರು ಬಗರ್ ಹುಕುಂ ಸಾಗುವಳಿ ಮಾಡುತ್ತಿಲ್ಲ ಎನ್ನುವುದನ್ನು ತಿಳಿಸಲಾಗಿದೆ. ನಮೂನೆ-53ನ್ನು ಸಲ್ಲಿಸದಿದ್ದರೂ ಸಹ ಮತ್ತು ಸಾಕಷ್ಟು ಜಮೀನನ್ನು ಹೊಂದಿದ್ದರೂ ಸಹ ಚಂದ್ರ ಎನ್ನುವರಿಗೆ ಜಮೀನು ಮಂಜೂರು ಮಾಡಲಾಗಿದೆ ಎಂದು ದೂರುದಾರರು ಆಪಾದಿಸಿದ್ದು, ಆ ಬಗ್ಗೆ ದೂರುದಾರರ ದೂರು ಹಾಗೂ ಎದುರುದಾರರ ಆಕ್ಷೇಪಣೆಯ ಆಧಾರದ ಮೇಲೆ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಬಗರ್ ಹುಕುಂ ಸಾಗುವಳಿ ಮಾಡದಿದ್ದರೂ ಸಹ ಗಂಗಾಧರಯ್ಯ ಹಾಗೂ ಚಂದ್ರ ರವರಿಗೆ ಯಾವ ರೀತಿಯಲ್ಲಿ ಜಮೀನು ಮಂಜೂರಾಗಿರುತ್ತದೆ ಎನ್ನುವುದನ್ನು ಪರಿಶೀಲಿಸಬೇಕಾಗಿರುತ್ತದೆ. ಆಕಾರಣದಿಂದ ಮೇಲೆ ಹೇಳಿದ ವಿಚಾರದ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಇವರಿಗೆ ಆದೇಶಿಸಲಾಗಿತ್ತು.

6. ನಂತರದಲ್ಲಿ ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ ಉಪ ವಿಭಾಗ ಇವರು ಹಾಜರಾಗಿ ದಾಖಲಾತಿಗಳನ್ನು ಸಲ್ಲಿಸಿದ್ದು, ದಾಖಲಾತಿಗಳನ್ನು ಪರಿಶೀಲಿಸಿದಾಗ, ಎ.ಚಂದ್ರ ಎನ್ನುವವರು ನಮೂನೆ 53 ರಲ್ಲಿ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತಿಲ್ಲ. ಗಂಗಾಧರಪ್ಪ ಎನ್ನುವವರು ಸಲ್ಲಿಸಿರುವ ಅರ್ಜಿಯನ್ನು ತಿದ್ದಿರುವುದು ಕಂಡುಬಂದಿರುತ್ತದೆ. ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ದಿ.24/8/11 ರಂದು ಸಲ್ಲಿಸಿರುವ ವರದಿಯಲ್ಲಿ ಎ.ಚಂದ್ರ ಮತ್ತು ಗಂಗಾಧರಪ್ಪ ಎನ್ನುವವರು ಜಮೀನಿನ ಸಾಗುವಳಿ ನಡೆಸುತ್ತಿಲ್ಲ ಎಂಬುದಾಗಿ ಸ್ಥಳ ಪರಿಶೀಲನಾ ಮಹಜರ್‌ನಲ್ಲಿ ಮತ್ತು ವರದಿಯಲ್ಲಿ ತಿಳಿಸಿರುವುದು ಕಂಡುಬರುತ್ತದೆ. ಭೂ ಮಂಜೂರಾತಿ ಸಮಿತಿಯ ಠರಾವನ್ನು ತಿದ್ದುಪಡಿ ಮಾಡಿರುವುದು ಕಂಡುಬರುತ್ತಿದ್ದು, ಅರ್ಜಿಯನ್ನು ವಜಾಗೊಳಿಸಲಾಗಿದೆಯೆಂದು ಬರೆದಿದ್ದರೂ ಸಹ ಅದರ ಮೇಲೆ ಮಂಜೂರು ಮಾಡಲಾಗಿದೆಯೆಂದು ತಿದ್ದುಪಡಿ ಮಾಡಿರುವುದು ಕಂಡುಬರುತ್ತದೆ. ಗಂಗಾಧರಪ್ಪ ಎನ್ನುವರಿಗೆ ಸಾಕಷ್ಟು ಜಮೀನುಗಳು ಇದ್ದರೂ ಸಹ ಜಮೀನು ಮಂಜೂರಾಗಿರುತ್ತದೆ. ಸದರಿ ಅಂಶಗಳನ್ನು ಗಮನಿಸಿದಾಗ, ಭೂ ಮಂಜೂರಾತಿಯಲ್ಲಿ ಹಲವಾರು ಅಕ್ರಮಗಳು ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆದ್ದರಿಂದ, ಸದರಿ ಸಮಯದಲ್ಲಿ ತಹಶೀಲ್ದಾರ್, ಗ್ರಾಮ ಲೆಕ್ಕಿಗರು ಹಾಗೂ ಸರ್ವೆಯರ್ ಆಗಿದ್ದವರನ್ನು ಈ ಪ್ರಕರಣದ ಎದುರುದಾರರನ್ನಾಗಿ ಮಾಡಿ ಅವರಿಂದ ಆಕ್ಷೇಪಣೆಯನ್ನು ತರಿಸಲಾಗಿತ್ತು.

7. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಎನ್.ಗಂಗಾಧರಯ್ಯ ಬಿನ್ ನಂಜಪ್ಪ ಇವರು ನಮೂನೆ 53 ರಲ್ಲಿ ಬಗರ್‌ಹುಕುಂ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಿದ್ದು, ಯು.ಸಿ./ಆರ್.ಎನ್/368/98-99 ರಂತೆ ನಮೂನೆ 53 ವಹಿಯಲ್ಲಿ ನಮೂದಾಗಿರುತ್ತದೆ ಹಾಗೂ ಎ.ಚಂದ್ರ ಬಿನ್ ಅಶ್ವಥಯ್ಯರವರು ಸ.ನಂ.137 ಕ್ಕೆ ಬದಲಾಗಿ ಕೈತಪ್ಪಿನಿಂದ ಸ.ನಂ.136/2 ಕ್ಕೆ ನಮೂನೆ 53 ಅರ್ಜಿ ಸಲ್ಲಿಸಿರುತ್ತಾರೆ. ಎನ್.ಗಂಗಾಧರಯ್ಯ ಬಿನ್ ನಂಜಪ್ಪ ಮತ್ತು ಎ.ಚಂದ್ರು ಬಿನ್ ಅಶ್ವಥಪ್ಪ ಸಾಗುವಳಿ ಮಾಡುವ ಕಾಲದಲ್ಲಿ ಪರಸ್ಪರ ಅಡ್ಡಿ ಪಡಿಸುತ್ತಿದ್ದು, ಅವರಿಬ್ಬರೂ ಸ.ನಂ.137 ರಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವುದಿಲ್ಲವೆಂದು ಇವರಿಬ್ಬರೂ ಮಂಜೂರಾತಿಗೆ ಪ್ರಯತ್ನಿಸಿರುವ ಪ್ರದೇಶ ಒಂದೇ ಆಗಿರುವುದೆಂದು ರಾಜಸ್ವ ನಿರೀಕ್ಷಕರ

ವರದಿಯಿಂದ ತಿಳಿದುಬರುತ್ತದೆ. ರಿಟ್ ಪಿಟಿಷನ್ ಆದೇಶದಲ್ಲಿ ಇಬ್ಬರ ಅರ್ಜಿಗಳನ್ನು ಪರಿಶೀಲಿಸಿ 3 ತಿಂಗಳೊಳಗೆ ಇತ್ಯರ್ಥಪಡಿಸುವಂತೆ ಆದೇಶ ನೀಡಿದ್ದು, ಸದರಿ ಅರ್ಜಿಗಳಿಗೆ ಸಂಬಂಧಪಟ್ಟಂತೆ ರಾಜಸ್ವ ನಿರೀಕ್ಷಕರ ವರದಿಯನ್ವಯ ಗಂಗಾಧರಯ್ಯ ಮತ್ತು ಚಂದ್ರು ಇವರುಗಳು ಸಾಗುವಳಿ ಮಾಡುತ್ತಿಲ್ಲವೆಂದು ತಿಳಿಸಿ ಬಗರ್ ಹುಕುಂ ಸಕ್ರಮೀಕರಣ ಸಮಿತಿಯ ಅಧ್ಯಕ್ಷರ ಮುಂದ ವಿಲೇ ಪಡಿಸಲು ಇಡಲಾಗಿತ್ತು. ಸಮಿತಿಯ ಸಭೆಯಲ್ಲಿ ಅಧ್ಯಕ್ಷರು ಇಬ್ಬರ ಅಹವಾಲನ್ನು ಆಲಿಸಿ ತಲಾ 2 ಎಕರೆ ಜಮೀನು ಮಂಜೂರು ಮಾಡಲು ತೀರ್ಮಾನ ಕೈಗೊಂಡು ಸಭಾ ನಡವಳಿಯಲ್ಲಿ ಮಾರ್ಪಾಡು ಮಾಡಿ ಸಹಿ ಹಾಕಿರುತ್ತಾರೆ. ಆ ಪ್ರಕಾರ ಸಾಗುವಳಿ ಚೀಟಿಯಲ್ಲಾಗಿರುತ್ತದೆ. ಮತ್ತು ಸದರಿ ಆದೇಶದ ವಿರುದ್ಧ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ.

8. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮಂಚೇನಹಳ್ಳಿ ಹೋಬಳಿ ಉಪ್ಪಾರಹಳ್ಳಿ ಗ್ರಾಮದ ಸ.ನಂ.137 ರಲ್ಲಿ ಜಮೀನು ಮಂಜೂರಾತಿಗಾಗಿ ನಮೂನೆ 53 ಅರ್ಜಿ ಸಲ್ಲಿಸಿರುವ ಅರ್ಜಿದಾರರ ಮನವಿಯಂತೆ ಮಹಜರ್ ವರದಿ ಸಲ್ಲಿಸಲು ಸೂಚಿಸಿದರ ಮೇರೆಗೆ ರಾಜಸ್ವ ನಿರೀಕ್ಷಕರೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ದೊಡ್ಡ ರಂಗಯ್ಯ ಎನ್ನುವವರು ಮಾತ್ರ 3 ಎಕರೆ ವಿಸ್ತೀರ್ಣದ ಅನುಭವದಲ್ಲಿದ್ದು, ಉಳಿದ ಅರ್ಜಿದಾರರು ಜಮೀನಿನ ಅನುಭವದಲ್ಲಿ ಇಲ್ಲದೆ ಇರುವುದು ಕಂಡುಬಂದಿರುತ್ತದೆ. ಈ ಸಂಬಂಧ ರಾಜಸ್ವ ನಿರೀಕ್ಷಕರು, ಮಂಚೇನಹಳ್ಳಿ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಗ್ರಾಮಸ್ಥರ ಸಮಕ್ಷಮದಲ್ಲಿ ಮಹಜರ್ ಮಾಡಲಾಗಿರುತ್ತದೆಯೆಂದು ಹೇಳಿರುತ್ತಾರೆ.

9. 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮಂಚೇನಹಳ್ಳಿ ಹೋಬಳಿ ಉಪ್ಪಾರಹಳ್ಳಿ ಗ್ರಾಮದ ಸ.ನಂ.137 ರಲ್ಲಿ ನಮೂನೆ 53 ರಲ್ಲಿ ರೈತರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮಸ್ಥರು ರೈತರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ತೋರಿಸಿದ ಪ್ರಕಾರ ಅಳತೆ ಮಾಡಿ ನಕ್ಷೆಯನ್ನು ತಯಾರಿಸಿರುತ್ತಾರೆಂದು ಹೇಳಿರುತ್ತಾರೆ.

10. ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಅರ್ಜಿದಾರರಾದ ಗಂಗಾಧರಪ್ಪ ಮತ್ತು ಎ.ಚಂದ್ರ ಇವರು ಸ.ನಂ.137 ರಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿಲ್ಲ ಎಂಬುದಾಗಿ ದಿ.24/8/2011 ರಂದು ರಾಜಸ್ವ ನಿರೀಕ್ಷಕರು ಸ್ಪಷ್ಟವಾದ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ಆದರೆ, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಂತರದಲ್ಲಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ತಾಲ್ಲೂಕು ಸರ್ವೆಯರ್ ಒಂದು ಸ್ಕೆಚ್‌ನ್ನು ತಯಾರಿಸಿ ಎ.ಚಂದ್ರ ಹಾಗೂ ಗಂಗಾಧರಪ್ಪ ಎನ್ನುವವರು ತಲಾ 2 ಎಕರೆ ಪ್ರದೇಶದ ಅನುಭವದಲ್ಲಿರುವುದಾಗಿ ತೋರಿಸಿ ಸ್ಕೆಚ್‌ನ್ನು ತಯಾರಿಸಿರುವುದು ಕಂಡುಬರುತ್ತದೆ. ಸದರಿಯವರು ಅನುಭವದಲ್ಲಿ ಇರದೇ ಇದ್ದರೂ ಸಹ ಸ್ಕೆಚ್‌ನ್ನು ತಯಾರಿಸಿ ನಂತರದಲ್ಲಿ ತಹಶೀಲ್ದಾರ್‌ರವರು ಸಾಗುವಳಿ ಚೀಟಿಯನ್ನು ಮಂಜೂರು ಮಾಡಿರುವುದು ಅವರ ಅಧಿಕಾರಿ ದುರುಪಯೋಗವನ್ನು ತೋರಿಸುತ್ತದೆ. ಗಂಗಾಧರಯ್ಯ ರವರು ಸಲ್ಲಿಸಿರುವ ನಮೂನೆ 53 ರ ಅರ್ಜಿಯಲ್ಲಿ ಸರ್ವೆ ನಂಬರ್ ಹಾಗೂ ವಿಸ್ತೀರ್ಣವನ್ನು ತಿದ್ದುಪಡಿ

ಮಾಡಿರುವುದು ಕಂಡುಬರುತ್ತಿದೆ. ಎ.ಚಂದ್ರ ಎನ್ನುವವರಿಗೆ ಸಂಬಂಧಪಟ್ಟಂತೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತಿಲ್ಲ. ಆದರೂ ಸಹ ಜಮೀನು ಮಂಜೂರು ಮಾಡಿರುವುದು ತಹಶೀಲ್ದಾರ್‌ರವರ ಸ್ವಜನ ಪಕ್ಷಪಾತವನ್ನು ತೋರಿಸುತ್ತದೆ. ಮೇಲಿನ ಅಂಶಗಳನ್ನು ಗಮನಿಸಿದಾಗ, 1 ರಿಂದ 3ನೇ ಎದುರುದಾರರು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುವುದು ಹಾಗೂ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದುದರಿಂದ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯು ಅವರ ಮೇಲಿನ ಅಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ. ಆದ್ದರಿಂದ, 1 ರಿಂದ 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

11. 1 ರಿಂದ 3ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, 1 ರಿಂದ 3ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಹಾಗೂ **ಶ್ರೀ.ನಾಗರಾಜ ಶೆಟ್ಟಿ ಇವರು ದಿ.30/9/2015 ರಂದು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

31.1.18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**

31/01